



ಈಗ ಮನೆಗೆಲಸ, ಅಡುಗೆ ಕೃಷಿಗೆ ಸಮಯ ಹೇಗೆ ಎಂದರೆ, ಬೆಳಗಿನ ಹೊತ್ತು ಮನೆವಾರ್ತೆಗೆ ಮೀಸಲು. ಮಧ್ಯಾಹ್ನದ ನಂತರ ಕಸಿ, ಬೀಜ, ಅಡಿಗಿಡಗಳ ತಯಾರಿ. ತೊಟ್ಟೆಯಲ್ಲಿ ಮಣ್ಣು ಮರಳು ತುಂಬಿಸಿಡುವ ಕೆಲಸ. ತೋಟದಲ್ಲಿ ಹಿಪ್ಪಲಿ ನೆಡುವ, ಅದಕ್ಕೆ ಮೆಣಸು ಕಸಿ ಹೀಗೆ ಆಯಾ ಕಾಲಕ್ಕೆ ಕೆಲಸ ನಡೆಯುತ್ತದೆ. ತನ್ನ ಕೆಲಸಕ್ಕೆ ಪತಿಯ ನೆರವೂ ಇರುವುದರಿಂದ ಎಲ್ಲ ಸಾಧ್ಯವಾಗುತ್ತಿದೆ ಎಂದು ನಗುತ್ತಾರೆ. ಆಸಕ್ತಿ, ಶ್ರದ್ಧೆ ಇರುವಾಗ ಕೆಲಸಕ್ಕೆ ಸಮಯ ತಾನೇ ಒದಗಿ ಬರುತ್ತದೆ ಎಂಬ ತತ್ವ ಅವರ ಮಾತಿನ ಹಿಂದಿತ್ತು.

ಮಲಗಿದ್ದವು. 'ಅದನ್ನು ಎತ್ತಿ ಮೇಲೆ ಕೋಲಿಗೆ ಕಟ್ಟಬಹುದಲ್ಲ?' ಎಂದರೆ, 'ಇಲ್ಲ, ಅವು ಹೀಗೆ ಬಾಗಿದ್ದರೆ ಗಿಡ ಆಹಾರವನ್ನು ಸುಲಭವಾಗಿ ಸರಬರಾಜು ಮಾಡುತ್ತಂತೆ' ಬಂತು ಉತ್ತರ. 'ಪಪ್ಪಾಯಿ ನೋಡಿ ಹಳದಿ ಕಾಯಿಗಳು. ಅಪರೂಪವಲ್ವಾ, ಹಣ್ಣು ಯಾವ ಬಣ್ಣದ್ದು? ತಿನ್ನೋಕೆ ಹೇಗಿರುತ್ತೆ?' 'ಸಿಹಿಯಾಗಿದೆ, ಅದು ನಸುಗುಲಾಬಿಗೆ ತಿರುಗಿದ ನಂತರವೇ ಕೊಯ್ಯಬೇಕು. ಇದು ನೋಡಿ ಗುಲಾಬಿ ಬಣ್ಣದ ಗೆಣಸು, ನಿಮ್ಮಲ್ಲೂ ನೆಟ್ಟುಕೊಳ್ಳಿ ಎಂದು ಒಂದು ಬಳ್ಳಿ ಕತ್ತರಿಸಿ ನನ್ನ ಕೈಗಿತ್ತರು.

ಮಧ್ಯಮ ಗಾತ್ರದ ಹಲಸಿನ ಮರಗಳು, ಅದರಲ್ಲಿ ಎರಡರಲ್ಲಿ ಆಗಲೇ ಜೊಂಪೆ ಕಾಯಿಗಳು ಬಿಟ್ಟಿವೆ. ಅವು ನೋಡಿ, ರುದ್ರಾಕ್ಷಿ ಹಲಸಿನ ಮರಗಳು. ಒಂದೆರಡನ್ನು ಮಾತ್ರ ಉಳಿಸಿ ಉಳಿದವನ್ನು ತೆಗೆಯಬೇಕು ಎನ್ನುವ ಮಾಹಿತಿಯನ್ನು ಇಂದಿರಾ ನೀಡಿದರು. ಭೈರುಂಬೆಯ ಕೃಷಿ ಕುಟುಂಬ ಅವರದು. ಶಾಲೆಗೆ ಹೋಗುವಾಗ ಪಕ್ಕದ ಅಶೀಸರದ ಅವರ ಮಾವ ಗುಲಾಬಿ, ಬದನೆ ಕಸಿ ಕಟ್ಟುವುದನ್ನು ಕಲಿಸಿದರು. ಪತಿ ಗೋಪಾಲ ಹೆಗಡೆ ಅವರು ಸಂಸ್ಥೆಯೊಂದರ ಉದ್ಯೋಗಿಯಾಗಿದ್ದರು. ಹೊರ ಊರುಗಳಲ್ಲಿದ್ದರೂ ಸದಾ ಬೆಳೆಗಳ ಬಗ್ಗೆಯೇ ಚರ್ಚೆ.

ಗಂಡನ ನಿವೃತ್ತಿಯ ನಂತರ ಸ್ವಂತ ಊರಾದ ಹುಳಗೋಳದಲ್ಲಿ ನೆಲೆಸಿದ್ದಾರೆ. ಕಲಿತಿದ್ದನ್ನೆಲ್ಲ ಪ್ರಯೋಗಕ್ಕೊಳಪಡಿಸುವ ಸಮಯ ಒದಗಿ ಬಂದಿತು. ಜೊತೆಗೆ ಪತಿಯ ಸಹಕಾರವೂ ದೊರೆತಿತ್ತು. ಆಗಾಗ ಮಾವು ಕಸಿ ಕಟ್ಟಲಾರಂಭಿಸಿದರು, ಮಾವಿನ ಜೊತೆ ಹಲಸು ಆರಂಭವಾಯ್ತು. ಉತ್ತಮ ಹಲಸು ಮತ್ತು ಮಾವಿನ ಸ್ಥಳೀಯ ತಳಿಗಳನ್ನು ಅರಸತೊಡಗಿದರು. ಶಿರಸಿಯ ಹತ್ತು ತಳಿಗಳನ್ನು ಆಯ್ಕೆ ಮಾಡಿಟ್ಟಿದ್ದರು. ಸಾಗರದ ಬಳಿಯ ಕೆಳದಿ ಬಕ್ಕೆ, ಬಕ್ಕೆ ಮತ್ತು ಹಲಸಿನ ವಿಚಾರಕ್ಕೆಳಿದರೆ ಅಪಾರ ವೈವಿಧ್ಯ ಇದೆ.

ಇಂದಿರಾ ಅವರ ಆಸಕ್ತಿ ಇಚ್ಛೆಯಾಗಿ ಮಾರ್ಪಟ್ಟಂತೆ ಕಸಿ ಕೌಶಲವೂ ತಾನೇ ತಾನಾಗಿ ಕೈ ಹಿಡಿಯತೊಡಗಿತು. ಪ್ರಾಯೋಗಿಕ ಅಧ್ಯಯನ ನಡೆಸತೊಡಗಿದರು. ಸಮಯ, ವಾತಾವರಣ, ಮಣ್ಣು ಇತ್ಯಾದಿಗಳನ್ನು ಮತ್ತೆ ಮತ್ತೆ ಬದಲಿಸಿ ಪ್ರಯೋಗ ಮಾಡುತ್ತಾರೆ. ಕೆಲವೊಮ್ಮೆ ತಿಂಗಳೂ ಕಸಿ ಮಾಡಿದ್ದಿದೆ. ಮಾವು ಮತ್ತು ಹಲಸು ಕಸಿಗೆ ನಿರ್ದಿಷ್ಟ ಕಾಲಬೇಕು, ಇಂಥ ವಾತಾವರಣವೇ ಬೇಕು, ಇಷ್ಟು ದಿನಗಳ ನಂತರವೇ ಬೇರೆಡೆ ವರ್ಗಾಯಿಸಬೇಕು ಎಂಬೆಲ್ಲ ವಿವರಗಳನ್ನೂ ನೀಡಿದರು.

## ಮಾವಿನ ರುಚಿ

ಅಪರೂಪದ ಮಾವು ತಳಿಗಾಗಿ ಪತಿಯೊಂದಿಗೆ ದೂರದೂರದವರೆಗೆ ಹೋಗಿ ಕುಡಿ ಸಂಗ್ರಹಿಸಿ ತಂದಿದ್ದಿದೆ. ದೂರದ ಕಸಿ ಕುಡಿಗಳನ್ನು ಜೋಪಾನವಾಗಿ ಒದ್ದೆ ಪೇಪರ್ ಅಥವಾ ಒದ್ದೆ ಬಟ್ಟೆಯಲ್ಲಿ ಸುತ್ತಿ ತರುತ್ತಾರೆ. ಉಪ್ಪಿನಕಾಯಿಗೆ, ಕೊಚ್ಚುಗಾಯಿಗೆ ಹೀಗೆ ಮಾವಿನ ವಿಧವಿಧದ ಕಸಿ ಮಾಡಿದ್ದಾರೆ. ಕೆಲವರು ಕುಡಿ ತಂದು ಕಸಿ ಕಟ್ಟಿಸಿಕೊಂಡು ಹೋಗುತ್ತಾರೆ. ಹೀಗೆ ಅರಸಾಪುರ ಮಾವು, ಅನೇಕ ಸಾಸ್ಮೆ ಮಾವು, ಕೆಲವು ಕಾಡು ಮಾವು, ಮಲೆನಾಡಿನ ಖ್ಯಾತಿ ಅಪ್ಪೆಮಿಡಿಯ ತಳಿಯೊಂದು ಮರುಹುಟ್ಟು ಪಡೆದಿವೆ.

'ಕಸಿಗೆ ಅಡಿಗಿಡ ಸದೃಢವಾಗಿರಬೇಕಷ್ಟೆ, ಕಾಡು ತಳಿಯೇ ಆಗಬೇಕೆಂದಿಲ್ಲ' ಅನ್ನುತ್ತಾರೆ ಇಂದಿರಾ. ಹಲಸಿನ ಬೀಜ ಮತ್ತು ಮಾವಿನ ಒರಟೆ ಊರಲು ಅವರ ಬಳಿ ಸದಾಕಾಲ ಮಣ್ಣು, ಗೊಬ್ಬರ ತುಂಬಿದ ಪ್ಲಾಸ್ಟಿಕ್ ತೊಟ್ಟೆಗಳು ಸಿದ್ಧವಿರುತ್ತವೆ. ಕಸಿಗೆ ಕುಡಿ ಕಳಿಸಿ ಎಂದಾಗ ಕೆಲವರು ಇಡೀ ದೊಡ್ಡ ದೊಡ್ಡ ರೆಂಬೆಗಳನ್ನೇ ಕತ್ತರಿಸಿ ಕಳಿಸಿದ್ದಿದೆ. ಹಲಸು ಸೂಕ್ಷ್ಮ, ಬಿಸಿಲಿಗೆ ಬಾಡಿ ಒಂದು ಚಿಗುರು, ಒಂದು ಕಣ್ಣು ಕೂಡ ಸಿಗದೆ ಒಣಗಿ ಹೋಗಿರುವುದೂ ಉಂಟು.

ಸಾಮಾನ್ಯವಾಗಿ ಮಲೆನಾಡಿನ ಹೆಂಗಳೆಯರೆಲ್ಲರಿಗೂ ತಮ್ಮ ತೋಟ, ಬೆಟ್ಟದಲ್ಲಿ ನಡೆಯುವ ಕೆಲಸಕಾರ್ಯಗಳು, ಅಲ್ಲಿ ದೊರೆಯುವ ವಿವಿಧ ಹಣ್ಣು ಕಾಯಿಗಳ ಬಗ್ಗೆ ತಿಳಿದೇ ಇರುತ್ತದೆ. ಆದರೆ ಇಂದಿರಾ ಅವರು ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ 15 ವರ್ಷಗಳಿಂದ ಕಸಿಗಿಡಗಳನ್ನು ತಯಾರಿಸುತ್ತ, ಕೃಷಿಕೆಲಸದಲ್ಲೂ ತೊಡಗಿದ್ದಾರೆ.

